ಒಡೆಯರಾಜ್‌ರವರು ಮಾತನಾಡುವಾಗ ತಾವು ಹೇಳಿದ್ದೀರಿ! ನಾನು ಸರಿಯಾಗಿಯೇ ಸ್ಟೇಟ್‌ಮೆಂಟ್ ಕೊಡುತ್ತೇನೆಂದು. ಇವತ್ತು ಇದರಿಂದ ಮಾನ್ಯ ಸದಸ್ಯರಿಗೆ ನೋವು ಆಗುವುದಿಲ್ಲವೆ? ಈ ರೀತಿ ತಪ್ಪು ಹೇಳಿಕೆಗಳನ್ನು ಒದಗಿಸಿಕೊಟ್ಟಂತ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ನಿನ್ನೆ ಕೊಟ್ಟಿರತಕ್ಕ ಮತ್ತು ಇವತ್ತು ಕೊಟ್ಟಿರತಕ್ಕ ಹೇಳಿಕೆಗೂ ಅಜಗಜಾಂತರ ವ್ಯತ್ಯಾಸ ಇದೆ.

ಶ್ರೀ ಡಿ. ದೇವರಾಜ ಅರಸ್.—ಈ ಸಭೆಯ ನಿಯಮಗಳ ಪ್ರಕಾರ ತಮ್ಮ ಅಪ್ಪಣೆ ಮೇರೆಗೆ ಕರೆಕ್ಷ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಮಾನ್ಯ ಸದಸ್ಯರು ಹೊಸಬರು ಅವರಿಗೆ ಬಹುಶಃ ಗೊತ್ತಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು.—ತಪ್ಪು ವರದಿಗಳನ್ನು ತಿದ್ದುಪಾಟು ಮಾಡಿಕೊಳ್ಳುವುದಕ್ಕೆ ನಿಯಮಾವಳಿ ಪ್ರಕಾರ ಸಭೆಯ ಗಮನಕ್ಕೆ ತಂದು ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಸಿ. ಎಂ. ಇಬ್ರಾಹಿಂ.—ತಪ್ಪು ಮಾಹಿತಿ ಒದಗಿಸಿದ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಅಧ್ಯಕ್ಷರು.—ನಿಯಮದ ಪ್ರಕಾರ ಅವಕಾಶ ಇದೆ; ಮತ್ತೆ ತಾವು ಪ್ರಶ್ನೆ ಮಾಡಬಾರದು.

ಶ್ರೀ ಡಿ. ದೇವರಾಜ ಅರಸ್.—ಯಾವುದಾದರೂ ತಪ್ಪು ವರದಿಗಳು ಆದಾಗ ಅವುಗಳನ್ನು ತಿದ್ದಿಕೊಳ್ಳುವುದಕ್ಕೆ ನಿಯಮದ ಪ್ರಕಾರ ಅವಕಾಶ ಇದೆ. ದುರುದ್ದೇಶದಿಂದ ಮಾಡಿದರೆ ಅಧಿಕಾರಿಗಳ ಮೇಲೆ ತಪ್ಪು ಹೊರಿಸಬೇಕಾಗುತ್ತದೆ; ಶಿಕ್ಷೆ ಕೂಡ ಕೊಡಬೇಕಾಗುತ್ತದೆ. ಆದರೆ ಇಲ್ಲಿ ಅಂಥದ್ದೇನೂ ಇಲ್ಲ; ಮನ್ನಿಸಬೇಕಾಗುತ್ತದೆ.

Message from Legislative Council Announcement

MR. SPEAKER.—I have received the following Message from the Chairman, Legislative Council :—

> "As required under rule 106 of the Rules of Procedure and Conduct of Business in the Legislative Council I send here with the City of Mysore Improvement Trust Board Bill which has been agreed to by the Legislative Council without amendment on 17th July 1978"

Taking up Report on the Mysore University for consideration

ಶ್ರೀ ಜೆ. ಹೆಚ್. ಪಟೇಲ್.—ಕಳೆದ ಎರಡು ದಿವಸದಿಂದ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಏಕಸದಸ್ಯರ ವರದಿಯನ್ನು ಚರ್ಚೆ ಮಾಡಬೇಕೆಂದು ಬರೆದು ಕಳಿಸುತ್ತಿದ್ದೇವೆ; ಅದು ಏಕೋ ಬರುತ್ತಿಲ್ಲ. ನಾನು ವಿವರ ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಯಾವಾಗ ಅನುಮತಿ ಕೊಡುತ್ತೀರಿ?

ಅಧ್ಯಕ್ಷರು.—ಇದನ್ನು ಕಾರ್ಯಕಲಾಪಗಳ ಸಲಹಾ ಸಮಿತಿಯ ಮುಂದೆ ಇಟ್ಟು ನಾನು ವಿಚಾರ ಮಾಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೂ, ಇದಕ್ಕೂ ಸಂಬಂಧ ಇಲ್ಲ; ಅನುಮತಿ ಕೊಡುವವರಂ ತಾವು.

ಅಧ್ಯಕ್ಷರು.—ನಾನು ವಿಚಾರ ಮಾಡಿ; ನಾಳೆ ತಿಳಿಸುತ್ತೇನೆ.

Difficulties in Kheta Transfers and Sanction of Plans

ಶ್ರೀ ಟಿ. ಆರ್. ಶಾಮಣ್ಣ.—ಇವತ್ತು ಖಾತಾ ಟ್ರಾನ್ಸ್‌ಫರ್ ಮತ್ತು ಪ್ಲಾನ್ ಮಂಜೂರು ಆಗುವುದು ಬಹಳ ಕಷ್ಟವಾಗಿದೆ. ಇದರ ಬಗ್ಗೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರು ಹೇಳಿಕೆ ಕೊಡುತ್ತೇನೆಂದು ಹೇಳಿದರು; ಇದರ ಬಗ್ಗೆ ಏನು ಹೇಳುತ್ತೀರಿ?